**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ. ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

ಕ್ರಿ ಮೊ ಸಂಖ್ಯೆ 409 / 2014

ಫಿರ್ಯಾದಿ ಃ ರಾಜ್ಯದ ಪರ ಶಿವಮೊಗ್ಗ ರೇಲ್ವೇ ಪೋಲೀಸ್

ವಿರುದ್ಧ

ಆರೋಪಿಗಳು ಃ 1) ಹರೀಶ ಯಾನೆ ವೇಸ್ಟ್ ಬಿನ್ ವೆಂಕಟೇಶಪ್ಪ,
2) ಭಾಸ್ಕರ್ ಬಿನ್ ಶಂಭು,
3) ಹರೀಶ ಯಾನೆ ಡಾಂಬರ್ ಬಿನ್ ದಿಃನಾಗರಾಜು.

----

## ದೋಷಾರೋಪಣೆ

ಶ್ರೀಮತಿ ಜಯಲಕ್ಷ್ಮಿ.ಎನ್.ಬಿ, ಬಿ.ಎ.ಎಲ್, ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ, ತರೀಕೆರೆ ಆದ ನಾನು ನಿಮ್ಮಗಳ ವಿರುದ್ಧ ಮಾಡುವ ದೋಷರೋಪಣೆಗಳೇನೆಂದರೆಃ-

ದಿನಾಂಕ 23.01.2014 ರಂದು ಚಾಸಾ.1 ಮತ್ತು ಚಾಸಾ.2 ರವರು ಬೆಂಗಳೂರು-ಶಿವಮೊಗ್ಗ ಪ್ಯಾಸೆಂಜರ್ ರೈಲುಗಾಡಿಯಲ್ಲಿ ತಿಪಟೂರಿನ ಶಾರದಾನಗರದಿಂದ ತರೀಕೆರೆಗೆ ಪ್ರಯಾಣ ಮಾಡುವಾಗ ರಾತ್ರಿ 10-45 ಗಂಟೆ ಸಮಯದಲ್ಲಿ ಶಿವಪುರ ರೇಲ್ವೇ ನಿಲ್ದಾಣದಲ್ಲಿ ರೈಲುಗಾಡಿಯು ಬಂದು ನಿಲ್ಲುವ ವೇಳೆಯಲ್ಲಿ ಆರೋಪಿಗಳಾದ ನೀವು, ನಿಮ್ಮ ಪೈಕಿ ಮೂರನೇ ಆರೋಪಿ ಒಂದು ಮತ್ತು ಎರಡನೇ ಆರೋಪಿಗಳ ಸಹಾಯದಿಂದ ಚಾಸಾ.2 ರವರ ಕತ್ತಿನಲ್ಲಿದ್ದ ಸುಮಾರು 20,000/- ರೂ ಬೆಲೆ ಬಾಳುವ 15 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ನಿಧಾನವಾಗಿ ಚಲಿಸುತ್ತಿದ್ದ ರೈಲುಗಾಡಿಯಿಂದ ಜಿಗಿದು ಓಡಿ ಹೋಗಿದ್ದು, ಇದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 392 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 06ನೇ ಮಾರ್ಚ್ ಮಾಹೆ 2015

ಸಹಿ/-
(ಜಯಲಕ್ಷ್ಮಿ ಎನ್.ಬಿ)
ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ,
ತರೀಕೆರೆ.

ವೆಂಕ್ಟೇಶ್ ಃ